### ರಿಕೆಟ್ಸಿಯಾ ಜ್ವರ

ಇದು ದನಕರುಗಳ ಚರ್ಮದ ಮೇಲೆ ವಾಸಿಸುವ ಉಣ್ಣೆಗಳ ಕಡಿತದಿಂದ ಉಂಟಾಗುವ ಒಂದು ಸೋಂಕುರೋಗ. ರಿಕೆಟ್ಸಿಯೇ ಎಂಬ ಸೂಕ್ಷ್ಮಾಣುಗಳ ಸೋಂಕಿನಿಂದ ಉಂಟಾಗುವ ಇದರಲ್ಲಿ ರಾಕಿ ಮೌಂಟೇನ್ ಜ್ವರ, ಸ್ಕ್ರಬ್ ಟೈಫಸ್ ಮತ್ತು ಎಪಿಡೆಮಿಕ್ ಟೈಫಸ್ ಗಳೆಂಬ ವಿವಿಧ ಬಗೆಗಳಿವೆ.

### ರೋಗಲಕ್ಷಣಗಳು

ಜ್ವರ, ದುಗ್ಧಗ್ರಂಥಿಗಳು ಊದಿಕೊಳ್ಳುವುದು, ವಾಂತಿ, ಅಂಗೈ ಮತ್ತು ಅಂಗಾಲುಗಳಿಗಷ್ಟೇ ಸೀಮಿತವಾಗಿರುವ ಗುಲಾಬಿ ವರ್ಣದ ದದ್ದುಗಳು, ಯಕೃತ್ ಮತ್ತು ಗುಲ್ಮಗಳು ಗಾತ್ರದಲ್ಲಿ ಹಿಗ್ಗುವುದು ಮುಂತಾದವು ಈ ಕಾಯಿಲೆಯ ಪ್ರಮುಖ ರೋಗಲಕ್ಷಣಗಳು. ಕೆಲವೊಮ್ಮೆ ನ್ಯುಮೋನಿಯಾ ಮತ್ತು ಮೆದುಳಿನ ಉರಿಯೂತ ಉಂಟಾಗಿ ಸಾವುನೋವುಗಳಾಗುವ ಸಾಧ್ಯತೆ ಇರುತ್ತದೆ.

ರೋಗಲಕ್ಷಣಗಳು, ಚರ್ಮದ ಯಾವುದೋ ಭಾಗದಲ್ಲಿ ಉಣ್ಣೆ ಕಚ್ಚಿರುವ ಕುರುಹು ಮತ್ತು ಕೆಲವು ರಕ್ತ ಪರೀಕ್ಷೆಗಳ ಮೂಲಕ ಗುರುತಿಸಿ, ಸೂಕ್ತ ಆ್ಯಂಟಿಬಯೊಟಿಕ್‌ಗಳನ್ನು ಬಳಸಿ ಚಿಕಿತ್ಸೆ ನೀಡಲಾಗುತ್ತದೆ.

### ಜಪಾನೀಸ್ ಬಿ ಎನ್ ಸೆಫಲೈಟಿಸ್

ಕ್ಯೂಲೆಕ್ಸ್ ವಿಷ್ಣುಯಿ ಎಂಬ ಸೊಳ್ಳೆಗಳ ಕಡಿತದಿಂದ ಉಂಟಾಗುವ ಮೆದುಳಿನ ಉರಿಯೂತದ ಈ ಕಾಯಿಲೆಯನ್ನು ಜನಸಾಮಾನ್ಯರು 'ಮೆದುಳು ಜ್ವರ' ಎಂತಲೂ ಕರೆಯುತ್ತಾರೆ. ಭತ್ತದ ಗದ್ದೆಗಳಲ್ಲಿ ವಾಸಿಸುವ ಬೆಳ್ಳಕ್ಕಿ (ಆ್ಯಡ್ರಿಡ್ ಹಕ್ಕಿ) ಮತ್ತು ಹಂದಿಗಳಿಗೆ ಕಚ್ಚಿದ ಸೊಳ್ಳೆಗಳು ಮನುಷ್ಯನಿಗೆ ಕಚ್ಚಿದಾಗ ಈ ಕಾಯಿಲೆ ಉಂಟಾಗುತ್ತದೆ. ಜ್ವರ, ಫಿಟ್ಸ್, ಪ್ರಜ್ಞಾಹೀನತೆ ಮುಂತಾದವು ಈ ಕಾಯಿಲೆಯ ಪ್ರಮುಖ ರೋಗಲಕ್ಷಣಗಳು. ಮೆದುಳು ಪರೀಕ್ಷೆ, ಸಿ ಟಿ, ಎಂ ಆರ್ ಐ ಮುಂತಾದ ಕೆಲವು ಪರೀಕ್ಷೆಗಳಿಂದ ದೃಢೀಕರಿಸಿದ ನಂತರ, ಲಕ್ಷಣವನ್ನಾಧರಿಸಿದ ಚಿಕಿತ್ಸೆ ನೀಡಲಾಗುತ್ತದೆ. ಶೀಘ್ರವೇ ಗುರುತಿಸಿ ಚಿಕಿತ್ಸೆ ನೀಡದಿದ್ದಲ್ಲಿ ಬುದ್ಧಿಮಾಂದ್ಯತೆ, ಅಂಗವೈಕಲ್ಯ, ಅಂಧತ್ವ ಮುಂತಾದ ದುಷ್ಪರಿಣಾಮಗಳುಂಟಾಗುವ ಸಾಧ್ಯತೆಯಿರುತ್ತದೆ.

ಈ ಕಾಯಿಲೆಯು ಹೆಚ್ಚಾಗಿ ಕಂಡುಬರುವ ಪ್ರದೇಶಗಳಲ್ಲಿ ಜಪಾನೀಸ್ ಬಿ ಎನ್ ಸೆಫಲೈಟಿಸ್ ವಿರುದ್ಧದ ಲಸಿಕೆಯನ್ನು ಮಗುವಿನ ಒಂಬತ್ತು ಮತ್ತು ಹದಿನೈದು ತಿಂಗಳ ವಯಸ್ಸಿನಲ್ಲಿ, ಒಟ್ಟು ಎರಡು ಬಾರಿ ಉಚಿತವಾಗಿ ನೀಡಲಾಗುತ್ತದೆ.

**ಕಿವಿಮಾತು**

**ಶೀತ ಮತ್ತು ಜ್ವರದಂಥ ಸಾಮಾನ್ಯ ಸಮಸ್ಯೆಗೆ ಸಾಧ್ಯವಾದಷ್ಟೂ ಒಬ್ಬರೇ ವೈದ್ಯರ ಬಳಿ ತೋರಿಸಿ. ಜ್ವರ ಕಡಿಮೆಯಾಗಲಿಲ್ಲವೆಂದು ವೈದ್ಯರನ್ನು ಬದಲಾಯಿಸುತ್ತಾ ಹೋಗಬೇಡಿ. ಇದನ್ನು 'ವಿಂಡೋ ಶಾಪಿಂಗ್' ಎನ್ನಲಾಗುತ್ತದೆ. ಮಗು ಅನಗತ್ಯವಾಗಿ ಹಲವಾರು ವೈದ್ಯರ ಔಷಧಗಳಿಗೆ ಪ್ರಯೋಗ ಪಶುವಾಗಬೇಕಾಗುತ್ತದೆ. 'ನೆಗಡಿಯು ಔಷಧಗಳ ಬಳಕೆಯಿಂದ ಏಳುದಿನಗಳಲ್ಲಿ ಮತ್ತು ಯಾವುದೇ ಔಷಧಗಳಿಲ್ಲದೆ ಒಂದು ವಾರದಲ್ಲಿ ವಾಸಿಯಾಗುತ್ತದೆ' ಎಂಬ ನುಡಿಗಟ್ಟು ನೆನಪಿನಲ್ಲಿರಲಿ.**

**ಕಿವಿಮಾತು**

**ವೈದ್ಯರ ಶಿಫಾರಸ್ಸಿಲ್ಲದೆ ಯಾವುದೇ ಪ್ರಯೋಗಶಾಲಾ ಪರೀಕ್ಷೆಗಳನ್ನು ನೀವಾಗಿಯೇ ಮಾಡಿಸಬೇಡಿ. ಕೆಲವೊಮ್ಮೆ ಡೆಂಗಿ, ಟೈಫಾಯಿಡ್ ಮುಂತಾದ ಟೆಸ್ಟ್‌ಗಳು ಮಿಥ್ಯ ಧನಾತ್ಮಕ (ಫಾಲ್ಸ್ ಪಾಸಿಟಿವ್) ಫಲಿತಾಂಶ ನೀಡಬಲ್ಲವು. ಇದರಿಂದ ಅನಗತ್ಯವಾಗಿ ನಿಮ್ಮ ಆತಂಕ ಹೆಚ್ಚಾಗುತ್ತದೆ.**

## ನೇರ ಪ್ರಸಾರದಿಂದ ಉಂಟಾಗುವ ಕಾಯಿಲೆಗಳು

ಇವು ಹೆಚ್ಚಿನ ಸಂದರ್ಭಗಳಲ್ಲಿ ವೈರಾಣುವಿನಿಂದ ಉಂಟಾಗುವ ಸೋಂಕುರೋಗಗಳಾಗಿರುತ್ತವೆ. ಸಾಮಾನ್ಯ ನೆಗಡಿ ಮತ್ತು ಫ್ಲೂ ಗುಂಪಿಗೆ ಸೇರುವ ಇನ್ ಫ್ಲುಯೆಂಝಾ, ಹಂದಿ ಜ್ವರ (ಎಚ್1ಎನ್1), ಹಕ್ಕಿ ಜ್ವರ, ಕೊರೊನಾ ಮುಂತಾದವು.

ಮೂಗು ಸೋರುವಿಕೆ, ಸೀನು, ಗಂಟಲು ನೋವು, ಜ್ವರ, ಕೆಮ್ಮು, ಕಣ್ಣುಗಳು ಕೆಂಪಾಗುವುದು, ಸುಸ್ತು, ಮುಂತಾದವು ಸಾಮಾನ್ಯ ನೆಗಡಿಯ ರೋಗಲಕ್ಷಣಗಳಾಗಿದ್ದರೆ, ಜ್ವರ, ತಲೆನೋವು, ಸ್ನಾಯು ಸೆಳೆತ, ಅತೀವ ಮೈ ಕೈ ನೋವು, ವಾಂತಿ, ಬಳಲಿಕೆ ಮುಂತಾದವು ಎಲ್ಲಾ ಫ್ಲೂ ಸಂಬಂಧಿತ ಕಾಯಿಲೆಗಳ ರೋಗಲಕ್ಷಣಗಳು.

ಹೆಚ್ಚಿನ ಸಂದರ್ಭಗಳಲ್ಲಿ ಈ ಎಲ್ಲಾ ವೈರಾಣುಗಳ ಸೋಂಕುಗಳು ಜ್ವರ ನಿವಾರಕ ಮತ್ತು ನೋವು ನಿವಾರಕ ಔಷಧಗಳಂಥ ಕನಿಷ್ಠ ಚಿಕಿತ್ಸೆಯ ಸಹಾಯದಿಂದ ಸ್ವಯಂ ನಿಯಂತ್ರಣಕ್ಕೆ ಬರುವಂತಹವಾಗಿರುತ್ತವೆ. ಆದರೆ ಶಿಶುಗಳಲ್ಲಿ ಮತ್ತು ವಯೋವೃದ್ಧರಲ್ಲಿ ಹಾಗೂ ಅಸ್ತಮಾ, ಮಧುಮೇಹ, ಎಚ್‌ಐವಿ, ಮೂತ್ರಪಿಂಡ ವೈಫಲ್ಯ ಮುಂತಾದ ಸಮಸ್ಯೆಗಳಿಂದ ಬಳಲುವವರಲ್ಲಿ ನ್ಯುಮೋನಿಯಾ ಮತ್ತು ಉಸಿರಾಟದ ವೈಫಲ್ಯಗಳಂಥ ಗಂಭೀರ ದುಷ್ಪರಿಣಾಮಗಳುಂಟಾಗಿ ಸಾವುನೋವಿಗೆ ಕಾರಣವಾಗಬಲ್ಲವು. ಅವುಗಳನ್ನು ಗುರುತಿಸಿ ಸೂಕ್ತ ಚಿಕಿತ್ಸೆ ನೀಡಬೇಕು.



ಜ್ವರದ ತಾಪಕ್ಕೆ ಅಮ್ಮನ ಕಾಳಜಿಯ ಸ್ಪರ್ಶದಲ್ಲಿ ತಂಪಿದೆ...

ಫ್ಲೂ ಕಾಯಿಲೆಗೆ ಲಸಿಕೆ ಲಭ್ಯವಿರುತ್ತದೆ. ಆದರೆ ಫ್ಲೂಗೆ ಸಂಬಂಧಿಸಿದ ಎಲ್ಲಾ ವೈರಾಣುಗಳು ರೂಪಾಂತರ ಹೊಂದುವ ಗುಣವುಳ್ಳಂತಹವಾಗಿರುವುದರಿಂದ ವರ್ಷಕ್ಕೊಮ್ಮೆ ಈ ಲಸಿಕೆಯನ್ನು ನೀಡಬೇಕು.

### ದಡಾರ, ಸಿತಾಳೆ ಸಿಡುಬು ಮತ್ತು ರುಬೆಲ್ಲಾ

ಇವು ಕೂಡಾ ನೇರ ಸಂಪರ್ಕ ಮತ್ತು ತುಂತುರು ಹನಿಗಳ ಮೂಲಕ ಹರಡುವ ಸೋಂಕುರೋಗಗಳು. ಜ್ವರ, ಕೆಮ್ಮು, ಮೂಗು ಸೋರುವಿಕೆ, ಕಣ್ಣು ಕೆಂಪಾಗುವುದು ಮತ್ತು ಚರ್ಮದ ಮೇಲೆ ಮೂಡುವ ಗುಲಾಬಿ ವರ್ಣದ ದದ್ದುಗಳು ದಡಾರದ ಲಕ್ಷಣಗಳಾಗಿದ್ದರೆ, ವಿವಿಧ ಹಂತದಲ್ಲಿರುವ ನೀರುಗುಳ್ಳೆಯಂಥ ದದ್ದುಗಳು ಸಿತಾಳೆ ಸಿಡುಬಿನ ರೋಗಲಕ್ಷಣಗಳು.

ಕೆನ್ನೆಯ ಮೇಲೆ ಪ್ರಾರಂಭವಾಗುವ ದದ್ದುಗಳು, ಹಿಂಬದಿಯ ಕುತ್ತಿಗೆಯಲ್ಲಿರುವ ದುಗ್ಧಗ್ರಂಥಿಗಳು ಊದಿಕೊಳ್ಳುವುದು ಮತ್ತು ಜ್ವರ ರುಬೆಲ್ಲಾದ ರೋಗಲಕ್ಷಣಗಳು. ದಡಾರದಿಂದ ನ್ಯುಮೋನಿಯಾ, ಅತಿಸಾರ ಭೇದಿ, ಮೆದುಳಿನ ಉರಿಯೂತದಂಥ ದುಷ್ಪರಿಣಾಮಗಳುಂಟಾಗಿ ಸಾವುನೋವುಗಳು ಸಂಭವಿಸಬಹುದು. ಸಾಮಾನ್ಯವಾಗಿ ಸಿತಾಳೆ ಸಿಡುಬು ಸೌಮ್ಯ ಸ್ವರೂಪದ್ದಾಗಿರಬಹುದಾದರೂ